## ಬುದ್ಧಿಮತ್ತೆಗೆ ಅಯೋಡಿನ್



ಗರ್ಭಿಣಿಯರು ತಪ್ಪದೇ ಅಯೋಡಿನ್ ಸೇವನೆಯನ್ನು ಮಾಡಬೇಕು. ಇದರಿಂದ ಮಗುವಿನ ಮೆದುಳಿನ ಬೆಳವಣಿಗೆ ಸಮರ್ಪಕವಾಗಿ ಆಗುತ್ತದೆ ಎಂದು ತಜ್ಞರು ಸಲಹೆ ನೀಡಿದ್ದಾರೆ.

ಗರ್ಭದಲ್ಲಿರುವ ಶಿಶುವಿನ ಮೆದುಳಿನ ಬೆಳವಣಿಗೆ ಆರಂಭಿಕ ತಿಂಗಳುಗಳಲ್ಲಿ ಆಗುತ್ತದೆ. ತಾಯಿ ಅಯೋಡಿನ್ ಸೇವಿಸುವುದರಿಂದ ಶಿಶುವಿನ ಬುದ್ಧಿಮತ್ತೆ ಹೆಚ್ಚಾಗುತ್ತದೆ ಎನ್ನುವುದು ಸಂಶೋಧಕರ ಅಭಿಮತ.

ಗರ್ಭಿಣಿಯರು ಹಾಗೂ ಎದೆಹಾಲು ಉಣಿಸುವ ತಾಯಂದಿರು ಅಯೋಡಿನ್ ಸೇವಿಸುವುದರಿಂದ ಮಕ್ಕಳನ್ನು ಖರ್ಚಿಲ್ಲದೆ ಬುದ್ಧಿವಂತರನ್ನಾಗಿ ರೂಪಿಸಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

## ಭ್ರಮೆ ಕಳಚಲೊಂದು ಆ್ಯಪ್

ಭ್ರಮೆಯಲ್ಲಿ ಬಳಲುವ ಮನೋರೋಗಿಗಳ ಹಿತದೃಷ್ಟಿಯಿಂದ ಹೊಸ ಆ್ಯಪ್ ಒಂದನ್ನು ಕೇಂಬ್ರಿಜ್ ವಿಶ್ವವಿದ್ಯಾಲಯದ ಸಂಶೋಧಕರು ಅಭಿವೃದ್ಧಿ ಪಡಿಸಿದ್ದಾರೆ. ಅದನ್ನು ಸ್ಮಾರ್ಟ್‌ಫೋನ್ ಅಥವಾ ಟ್ಯಾಬ್‌ಗೆ ಡೌನ್‌ಲೋಡ್ ಮಾಡಿ ಅದರ ನಿರ್ದೇಶನದಂತೆ ಆಟ ಆರಂಭಿಸಿದರೆ ಭ್ರಮೆಯ ಜಗತ್ತಿನಿಂದ ಹೊರ ಬರಲು ಸಾಧ್ಯವಾಗುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಭ್ರಮೆ ಸೇರಿದಂತೆ ದ್ವಂದ್ವ, ಚಾಂಚಲ್ಯ ಹಾಗೂ ಚಿತ್ತಭ್ರಾಂತಿಯನ್ನು ಎದುರಿಸಲು ಅನುಕೂಲವಾಗುವಂತೆ ಈ ಆ್ಯಪನ್ನು ಅಭಿವೃದ್ಧಿ ಪಡಿಸಲಾಗಿದೆ. ಧ್ಯಾನ ಹಾಗೂ ಹೊಸ ಮಾನಸಿಕ ಚಿಕಿತ್ಸಾ ಪದ್ಧತಿಗೆ ಅನುಗುಣವಾಗಿ ಇದನ್ನು ಅಭಿವೃದ್ಧಿಪಡಿಸಲಾಗಿದೆ. ಇದು ಮಾನಸಿಕ ಸಮಸ್ಯೆಯನ್ನು ಗುಣಪಡಿಸಲು ಸಹಾಯ ಮಾಡುತ್ತದೆ ಎಂದು ಸಂಶೋಧಕರು ಹೇಳಿದ್ದಾರೆ.

## ಕ್ಯಾನ್ಸರ್ ಚಿಕಿತ್ಸೆಗೆ ಒಮೆಗಾ ಫ್ಯಾಟಿ ಆಸಿಡ್

ಒಮೆಗಾ ಫ್ಯಾಟಿ ಆ್ಯಸಿಡ್ 3 ಕ್ಯಾನ್ಸರ್ ಚಿಕಿತ್ಸೆಯಿಂದ ಚೇತರಿಸಿಕೊಳ್ಳುವ ರೋಗಿಗಳಿಗೂ ಸಹಾಯ ಮಾಡುತ್ತದೆ ಎಂದು ಬ್ರಿಟನ್ ಸಂಶೋಧಕರ ಅಧ್ಯಯನ ಹೇಳಿದೆ.

ಒಮೆಗಾ ಫ್ಯಾಟಿ ಆ್ಯಸಿಡ್ 3 ಹೃದಯಕ್ಕೆ ಮಾತ್ರ ಲಾಭದಾಯಕವಲ್ಲ. ಅದು ಕ್ಯಾನ್ಸರ್ ಪೀಡಿತರಿಗೆ ನೀಡುವ ಔಷಧೋಪಚಾರ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಹಾಯ ಮಾಡುತ್ತದೆ. ಅಷ್ಟೆ ಅಲ್ಲದೆ ರೋಗಿಯ ಬದುಕಿಗೂ ಚೇತರಿಕೆಯನ್ನು ನೀಡುತ್ತದೆ ಎನ್ನುವುದು ಸಂಶೋಧಕರ ಅಭಿಪ್ರಾಯ.

-ಟಿಪ್ಸ್

---

## ಸಮುದ್ರ ಮಥನ




### ಮಾಹಿತಿಪೂರ್ಣ

'ಆ್ಯಪ್‌ಗಳ ಲೋಕದಲ್ಲಿ' (ಸುಧಾ ಆಗಸ್ಟ್ 13) ಯು.ಬಿ. ಪವನಜ ಅವರ ಮುಖಪುಟ ಲೇಖನ ಮಾಹಿತಿಪೂರ್ಣವಾಗಿತ್ತು. ಸರಳ ಸ್ವಚ್ಛ ಕನ್ನಡದಲ್ಲಿ ಪ್ರತಿಯೊಬ್ಬರಿಗೂ ಅರ್ಥವಾಗುವ ಹಾಗೆ ಲೇಖಕರು ವಿವರಿಸಿ ಆ್ಯಪ್‌ಗಳ ಲೋಕಕ್ಕೆ ಕರೆದೊಯ್ದರು.

– ದರ್ಶನ್ ಜೈನ್, ಬೆಂಗಳೂರು, ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ, ಶಮನಿಧಿ, ಕೆಜಿಎಫ್

### ವಿಷಾದನೀಯ

ಕಿರು ತಂತ್ರಾಂಶಗಳ ಒಡನಾಟದಿಂದಾಗಿ ನಾವು ಮಾನವೀಯ ಸಂಬಂಧಗಳನ್ನು ಕಳೆದುಕೊಳ್ಳುತ್ತಾ ಬಂದಿರುವುದು ವಿಷಾದನೀಯ.

-ಸು. ವಿಜಯಲಕ್ಷ್ಮಿ, ಶಿವಮೊಗ್ಗ

### ಚಿಂತನೆಗೆ ಗ್ರಾಸ

'ನಿಮ್ಮೊಡನೆ' 'ಮೊಬೈಲ್ ಫೋನ್ ಅಪಶ್ರುತಿ' (ರಘುನಾಥ ಚ.ಹ.) ಚಿಂತನೆಗೆ ಗ್ರಾಸ ಒದಗಿಸಿತು.

–ಎಸ್. ಪ್ರಭಾ, ಬೆಂಗಳೂರು, ನಾರಾಯಣ ಯಾಜಿ, ಶಿರಾಲಿ, ರಘುನಾಥ ರಾವ್ ತಾಪ್ಸೆ, ದಾವಣಗೆರೆ, ಎಂ.ಜಿ. ರಾಮಚಂದ್ರ, ಮಂಡಗಳಲೆ

### ಅದ್ಭುತ ಬರಹ

'ಭರವಸೆಯ ಬೆಳಕು'(ಲಾವಣ್ಯಗೌರಿ ವೆಂಕಟೇಶ್) ಲೇಖನ ಅದ್ಭುತವಾಗಿದೆ.

–ಮುರಘೇಂದ್ರ, ಹುಬ್ಬಳ್ಳಿ, ವೈ.ಜಿ. ನರಸಿಂಹನ್, ಶಿವಮೊಗ್ಗ

### 'ಕೈಬೆರಳ ತುದಿಯಲ್ಲಿ..'

ನಾಗರತ್ನಾ ಗೋವಿಂದನ್ನವರ ಬರೆದ 'ಕೈಬೆರಳ ತುದಿಯಲ್ಲಿ..' ಲೇಖನದಲ್ಲಿ ಉಲ್ಲೇಖಿಸಿರುವ ಡಿಎಂಐಟಿ ವಿಧಾನದಿಂದ ಕೈಬೆರಳುಗಳ ಗುರುತುಗಳನ್ನು ಅಧ್ಯಯನ ಮಾಡಿ ಮಕ್ಕಳು ದೊಡ್ಡವರಾದ ಮೇಲೆ ಡಾಕ್ಟರ್ ಆಗುತ್ತಾರೋ, ಎಂಜಿನಿಯರ್ ಆಗುತ್ತಾರೋ ಎಂಬ ಮಾಹಿತಿಯನ್ನು ಈಗಲೇ ತಿಳಿದುಕೊಳ್ಳಬಹುದು. ಅದಕ್ಕಾಗಿ ಕಾಲೇಜಿನಲ್ಲಿ ಯಾವ ವಿಷಯವನ್ನು ಆಯ್ಕೆ ಮಾಡಬೇಕು ಎಂಬ ನಿರ್ಧಾರ ದೊರಕುತ್ತದೆ. ಮಕ್ಕಳು ಯಾಕೆ ಹಟ ಮಾಡುತ್ತಾರೆ ಎಂಬುದನ್ನು ಅರಿಯಬಹುದು, ಅವರ ಕಲಿಕಾ ಸಾಮರ್ಥ್ಯದ ಸುಳಿವೂ ಸಿಗುತ್ತದೆ ಎಂದು ವಿವರಿಸಲಾಗಿದೆ. ಅಂತೂ ಜ್ಯೋತಿಷ್ಯ, ವಾಸ್ತು, ಜಾತಕ ಇವುಗಳ ಜತೆಗೆ ಈ ವಿಧಾನವೂ ಸೇರ್ಪಡೆಯಾಯಿತು.!

–ಡಾ. ಲೀಲಾವತಿ ದೇವದಾಸ್, ಬೆಂಗಳೂರು

### ಸೊಗಸಾದ ಕಥೆ

'ಚೈತ್ರೆಯ ಚಿತ್ತಾಂತರಂಗ' ಎಸ್.ಪಿ. ವಿಜಯಲಕ್ಷ್ಮಿ ಅವರ ಕಥೆ ಸೊಗಸಾಗಿದೆ. ಮಹಾಭಾರತದ ಕಥೆಯ ಸನ್ನಿವೇಶವನ್ನು ಕಲಾತ್ಮಕವಾಗಿ ಚಿತ್ರಿಸಲಾಗಿದೆ.

–ಶ್ರೀಧರ ರಾಯಸಂ, ಬೆಂಗಳೂರು, ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

### ಬಾರದ ಲೋಕಕ್ಕೆ ಕಲಾಂ

'ಸರಳ ಸಜ್ಜನ ಕಲಾಂ', (ಅಬ್ದುಲ್ ರೆಹಮಾನ್ ಪಾಷ) ವಿಜ್ಞಾನ ಲೋಕದ ದಿಗ್ಗಜ ಡಾ. ಕಲಾಂ ಇಷ್ಟು ಬೇಗ ಬಾರದ ಲೋಕಕ್ಕೆ ಹೋಗಿದ್ದು ಅಸಂಖ್ಯಾತ ಜನರನ್ನು ಕಣ್ಣೀರಿನಲ್ಲಿ ರಿಸಿದೆ. ವಿದಾಯ ಲೇಖನ ಸಮಯೋಚಿತವಾಗಿದೆ.

–ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ, ಎಚ್.ಆನಂದಕುಮಾರ್, ಚಿತ್ರದುರ್ಗ, ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು, ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ, ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ, ಸುಂದರ್, ಬೆಂಗಳೂರು, ಮುಕುಂದ ಹೆರಕಲ್ಲ, ಕಲಬುರಗಿ

### ದೇವತಾ ಮನುಷ್ಯ!

ಹಾಸಿಗೆ ಹಿಡಿಯದೆ, ಯಾರಿಗೂ ತೊಂದರೆ ಕೊಡದೆ ತಮಗೆ ಪ್ರಿಯವಾದ ಜ್ಞಾನದಾನ ಮಾಡುವ ಸಮಯದಲ್ಲೇ ಅಸ್ತಂಗತರಾದ ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ನಿಜಕ್ಕೂ ಶ್ರೇಷ್ಠ ಭಾರತೀಯರು. ದೇಶದ ಅತ್ಯುನ್ನತ ಹುದ್ದೆ ಅಲಂಕರಿಸಿ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಜಗತ್ತಿಗೇ ತೋರಿಸಿದ್ದಾರೆ, ಅವರಂತೆಯೇ ಇದ್ದ, ಇರಬಲ್ಲ ಇನ್ನೊಬ್ಬ ವ್ಯಕ್ತಿಯನ್ನು ಹುಡುಕಬೇಕಿದೆ!

–ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

### ಸ್ಮರಣೀಯರು

ಕಳೆದ ಹತ್ತು ವರ್ಷಗಳಲ್ಲಿ ಕೋಟಿಗೂ ಹೆಚ್ಚು ಮಕ್ಕಳ ಜತೆ ನೇರವಾಗಿ ಮಾತನಾಡಿದ ಏಕೈಕ ರಾಜಕಾರಣಿ, ವಿಜ್ಞಾನಿ ಕಲಾಂ ನಿಜಕ್ಕೂ ಸ್ಮರಣೀಯರು.

–ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

### ತಪ್ಪಾಗಿ ಮುದ್ರಿತವಾಗಿದೆ

ನಿದ್ರೆಗೆ ಬೈನಾರಲ್ ಬೀಟ್ಸ್ (ಮುಖಪುಟ, ಜುಲೈ 30) ಅರ್ಶದ್ ಹುಸೇನ್, ಕೊಪ್ಪ ಅವರ ಲೇಖನ ಓದುಗರನ್ನು ತಪ್ಪುದಾರಿಗೆ ಎಳೆಯುವಂತಿದೆ. ಬೈನಾರಲ್ ಬೀಟ್ಸ್‌ನಿಂದ ನಿದ್ರೆ ಸಮಸ್ಯೆ ಬಗೆಹರಿಯುವ ಬಗ್ಗೆ ಯಾವುದೇ ವೈಜ್ಞಾನಿಕ ಪುರಾವೆಗಳಿಲ್ಲ. ನನ್ನ ಈ ಅಭಿಪ್ರಾಯ ಆಗಸ್ಟ್ 13ರ ಸಮುದ್ರಮಥನದಲ್ಲಿ ತಪ್ಪಾಗಿ ವ್ಯಕ್ತವಾಗಿದೆ. ಲೇಖನದ ಪರವಾಗಿ ಬರೆದವರ ಜತೆಗೆ ನನ್ನ ಹೆಸರು ಸೇರಿದ್ದು ಬೇಸರವಾಗಿದೆ.

–ಪ್ರಸನ್ನರಾವ್, ಮಂಗಳೂರು